೧) ವಿಶ್ವಬ್ಯಾಂಕ್ ನೆರವಿನಿಂದ ಸ್ಥಾಪಿಸುವ ರೇಷ್ಮೆ ಬಿತ್ತನೆ ಕೋಠಿಗಳು.

೨) ತಾಂತ್ರಿಕ ಸೇವಾ ಕೇಂದ್ರಗಳು.

೩) ಚಾಕಿ ಸಾಕಾಣಿಕೆ ಕೇಂದ್ರಗಳು ಮತ್ತು ರೇಷ್ಮೆ ಗೂಡಿನ ಮಾರುಕಟ್ಟೆಗಳು.

೪) ಹಿಪ್ಪನೇರಳೆ ತೋಟದ ಅಭಿವೃದ್ಧಿ ಮತ್ತು ಹುಳು ಸಾಕಾಣಿಕೆ.

ಇದೂ ಅಲ್ಲದೆ ಹುಳು ಸಾಕಾಣಿಕೆ ಮನೆ ಕಟ್ಟಲು ಉಪಕರಣಗಳನ್ನು ಕೊಳ್ಳಲು ಮತ್ತು ಹಿಪ್ಪನೇರಳೆ ತೋಟಗಳನ್ನು ಸ್ಥಾಪಿಸಲು ಮತ್ತು ನಿರ್ವಹಿಸಲು ಬ್ಯಾಂಕುಗಳಿಂದ ಮತ್ತು ಒದಗಿ ಸೊಸೈಟಿಗಳಿಂದ ಸಾಲ ಒದಗಿಸಲಾಗುತ್ತಿದೆ.

ಮೈಸೂರು ಎಲೆಕ್ಟ್ರಿಕಲ್ ಇಂಡಸ್ಟ್ರೀಸ್ ಬೆಂಗಳೂರು

೬೫ (೨೪೦ ಡಿ) ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).—ಮಾನ್ಯ ಕೈಗಾರಿಕೆ ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ಮೈಸೂರು ಎಲೆಕ್ಟ್ರಿಕಲ್ ಇಂಡಸ್ಟ್ರೀಸ್ ಕೈಗಾರಿಕಾ ವಿವಾದ ಕಾನೂನು ಅನ್ವಯಿಸದೇ ವಿನಾಕಾರಣ ಪಜಾ ಮಾಡಲ್ಪಟ್ಟ ಕಾರ್ಮಿಕರಿಗೆ ನ್ಯಾಯ ದೊರಕದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಕೈಗಾರಿಕಾ ವಿವಾದ ಕಾನೂನು ಈ ಸಂಸ್ಥೆಗೆ ಅನ್ವಯವಾಗುವಂತೆ ಸರ್ಕಾರದವರು ಕ್ರಮ ಗಳನ್ನು ಕೈಗೊಂಡಿದ್ದಾರೆಯೇ ?

ಇ) ಹಾಗಿದ್ದಲ್ಲಿ ಆ ಕ್ರಮಗಳೇನು ?

ಶ್ರೀ ಜೆ.ಹೆಚ್. ಪಟೇಲ್ (ವಾಣಿಜ್ಯ, ಕೈಗಾರಿಕೆ ಮತ್ತು ವಿದ್ಯುಚ್ಛಕ್ತಿ ಸಚಿವರು).—

ಅ) ಇಲ್ಲ.

ಆ) ಈಗ ಸದ್ಯದ ಪರಿಸ್ಥಿತಿಯಲ್ಲಿ ಇದರ ಅವಶ್ಯಕತೆ ಕಂಡುಬರುವುದಿಲ್ಲ.

ಇ) ಪ್ರಶ್ನೆ ಆ ಕ್ಕೆ ನೀಡಿರುವ ಉತ್ತರದಿಂದ ಈ ಪ್ರಶ್ನೆಗೆ ಉತ್ತರ ಉದ್ಭವಿಸುವುದಿಲ್ಲ.

ಬಾಗೇಶಪುರ ಸ್ಪೋನ್‌ವೇರ್ ಪೈಪ್ ಫ್ಯಾಕ್ಟರಿ ಬಗ್ಗೆ

೬೬ (೬೮) (೧) ಶ್ರೀ ಬಿ.ಎಸ್. ಆಚಾರ್ (ಬೈಂದೂರು).—ಮಾನ್ಯ ಕೈಗಾರಿಕೆ ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ಮೈಸೂರು ಮಿನರಲ್ಸ್ ಲಿಮಿಟೆಡ್ ನೇತೃತ್ವದಲ್ಲಿ ನಡೆಯುತ್ತಿರುವ ಬಾಗೇಶಪುರ ಸ್ಪೋನ್‌ವೇರ್ ಪೈಪ್ ಫ್ಯಾಕ್ಟರಿಯಲ್ಲಿ ಪೂರ್ಣ ಪ್ರಮಾಣದಲ್ಲಿ ಕೆಲಸ ಜರುಗುತ್ತಿದೆಯೆ ?

ಆ) ಸರ್ಕಾರದ ವಿವಿಧ ನಿಗಮಗಳಿಗೆ ಅಲ್ಲಿಯ ಉತ್ಪಾದನೆಗಳನ್ನು ಆದ್ಯತೆಯ ಮೇರೆಗೆ ಒದಗಿಸಲು ಯಾವ ಕ್ರಮ ಕೈಗೊಳ್ಳಲಾಗಿದೆ ?

ಇ) ಸದರಿ ಕಾರ್ಖಾನೆಯ ೧೯೮೫-೮೬ರ ಉತ್ಪಾದನಾ ಯೋಜನೆ ಹಾಗೂ ಮಾರಾಟದ ಬೇಡಿಕೆ ಏನು ?

ಶ್ರೀ ಜೆ.ಎಸ್. ದೇಶ್‌ಮುಖ್ (ಅರಣ್ಯ, ಗಣಿ ಮತ್ತು ಭೂವಿಜ್ಞಾನ ಮಂತ್ರಿಗಳು).—

ಅ) ಇಲ್ಲ,

ಆ) ಸರ್ಕಾರದ ಎಲ್ಲಾ ಇಲಾಖೆಗಳೂ ತಮ್ಮ ಅಗತ್ಯ ವಸ್ತುಗಳನ್ನು ಸರ್ಕಾರಿ ವಲಯಕ್ಕೆ ಸೇರಿದ ಕಂಪೆನಿ, ಕಾರ್ಪೊರೇಷನ್‌ಗಳಿಂದಲೇ ಕೊಳ್ಳುವಂತೆ ದಿನಾಂಕ ೧೨-೫-೮೬ರ ಸಿಐ ೧೨ ಎಸ್‌ಪಿಎಂ ೮೬ರ ಸರ್ಕಾರದ ಆದೇಶದಲ್ಲಿ ನಿರ್ದೇಶನ ನೀಡಲಾಗಿದೆ.

ಇ) ೧೯೮೫-೮೬ನೇ ಸಾಲಿಗೆ ಕಂಪೆನಿಯು ೩೦೦೦ ಮೆ.ಟನ್ ಉತ್ಪಾದನೆಯ ಗುರಿಯನ್ನು ಹೊಂದಿದ್ದು, ೧೫೧೭ ಮೆ.ಟನ್ ಉತ್ಪಾದನೆಯನ್ನು ಸಾಧಿಸಲಾಗಿದೆ. ಈ ಪೈಕಿ ಒಟ್ಟು ೧೧೨೫ ಮೆ.ಟನ್ ಪೈಪುಗಳನ್ನು, ೧೮೨ ಬೇಡಿಕೆಗಳ ಮೇರೆಗೆ ವಿವಿಧ ಖಾಸಗಿ ವ್ಯಾಪಾರಿಗಳಿಗೆ, ಕರ್ನಾಟಕ ನೀರು ಸರಬರಾಜು ಹಾಗೂ ಒಳಚರಂಡಿ ಮಂಡಳಿಗೆ ಮತ್ತು ಲೋಕೋಪಯೋಗಿ ಇಲಾಖೆಗಳಿಗೆ ಮಾರಾಟ ಮಾಡಿದೆ.

ಕಲಘಟಗಿಯಲ್ಲಿ ವಲಯ ಅರಣ್ಯಾಧಿಕಾರಿಗಳ ಕಛೇರಿ ಕಟ್ಟಡ ಕಟ್ಟುವ ಕ್ರಮದ ಬಗ್ಗೆ

೬೭ (೪೩೭) ಶ್ರೀ ಪಿ.ಸಿ. ಸಿದ್ದನಗೌಡರ (ಕಲಘಟಗಿ).—ಮಾನ್ಯ ಅರಣ್ಯ, ಗಣಿ ಮತ್ತು ಭೂವಿಜ್ಞಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗೆ ದಯವಿಟ್ಟು ಉತ್ತರಿಸುವರೇ :—

ಕಲಘಟಗಿಯಲ್ಲಿ ಅರಣ್ಯ ವಲಯ ಅಧಿಕಾರಿಗಳ ಕಛೇರಿಗೆ ಸ್ವಂತ ಕಟ್ಟಡ ಕಟ್ಟಲು ಸರಕಾರದವರು ಕ್ರಮ ತೆಗೆದುಕೊಳ್ಳುವರೆ ?

ಶ್ರೀ ಜೆ.ಎಸ್. ದೇಶ್‌ಮುಖ್ (ಅರಣ್ಯ, ಗಣಿ ಮತ್ತು ಭೂವಿಜ್ಞಾನ ಮಂತ್ರಿಗಳು). —

ಕ್ರಮ ಕೈಗೊಳ್ಳುವ ಪ್ರಮೇಯವಿಲ್ಲ.

ರಾಜ್ಯದಲ್ಲಿ ಪದವೀಧರ ಪಶುವೈದ್ಯರ ಪಶು ಚಿಕಿತ್ಸಾಲಯಗಳ ಬಗ್ಗೆ

೬೮ (೪೨೧) ಶ್ರೀ ಪಿ.ಸಿ. ಸಿದ್ದನಗೌಡರ (ಕಲಘಟಗಿ).—ಮಾನ್ಯ ರೇಷ್ಮೆ, ಪಶುಸಂಗೋಪನೆ ಮತ್ತು ಮತ್ಸ್ಯೋದ್ಯಮ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ರಾಜ್ಯದಲ್ಲಿರುವ ಪದವೀಧರ ಪಶುವೈದ್ಯ ಶಾಲೆಗಳು ಎಷ್ಟು ?

ಆ) ಕಲಘಟಗಿ ತಾಲ್ಲೂಕಿನಲ್ಲಿ (೧) ದುಮ್ಮವಾಡ (೨) ಮುತ್ತಗಿ (೩) ನೂಲ್ವಿಗಳಲ್ಲಿ ಸದರಿಪಶು ವೈದ್ಯ ಶಾಲೆಗಳನ್ನು ಸ್ಥಾಪಿಸಲಾಗುವುದೆ ?

ಶ್ರೀ ಕೆ.ಎಂ. ಕೃಷ್ಣ ರೆಡ್ಡಿ, (ರೇಷ್ಮೆ, ಪಶುಸಂಗೋಪನೆ, ಮತ್ತು ಮೀನುಗಾರಿಕೆ ಸಚಿವರು).—

ಅ) ರಾಜ್ಯದಲ್ಲಿನ ಒಟ್ಟು ಪದವೀಧರ ಪಶುವೈದ್ಯ ಶಾಲೆಗಳು ೫೨೫ ಧಾರವಾಡ ಜಿಲ್ಲೆಯಲ್ಲಿ ೪೩.

ಆ) ಸದರಿ ಗ್ರಾಮಗಳ ೧೦ ಅಂಶಗಳ ಮಾಹಿತಿಯನ್ನು ಕರೆಯಲಾಗಿದೆ. ಈ ಬಗ್ಗೆ ವರದಿ ಬಂದ ನಂತರ ಪರಿಶೀಲಿಸಲಾಗುವುದು.

ಗೇರು ಹಣ್ಣಿನ ರಸ ತಯಾರಿಸುವ ಬಗ್ಗೆ

೬೯ (೭೦) ಶ್ರೀ ಜೆ.ಎಸ್. ಆಚಾರ್ (ಬೈಂದೂರು).—ಮಾನ್ಯ ಅರಣ್ಯ, ಗಣಿ ಮತ್ತು ಭೂವಿಜ್ಞಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ: —

ಅ) ಸರ್ಕಾರದ ಅರಣ್ಯ ಇಲಾಖೆ ಮತ್ತು ಗೇರು ಅಭಿವೃದ್ಧಿ ನಿಗಮ ತೋಟಗಾರಿಕಾ ಇಲಾಖೆ ವಿವಿಧ ಸಂಸ್ಥೆಗಳು ಹಾಗೂ ಖಾಸಗಿಯವರ ಪಶ ಇರುವ ಸಹಸ್ರಾರು ಎಕರೆ ಗೇರು ತೋಟಗಳಲ್ಲಿ ಉತ್ಪನ್ನವಾಗುವ ಗೇರು ಹಣ್ಣು ವ್ಯರ್ಥವಾಗುತ್ತಿದ್ದು ಈ ಹಣ್ಣಿನಿಂದ ರಸ ತೆಗೆದು ಪರಿಷ್ಕರಿಸಿ ಮೂರು ಕಟ್ಟೆಗೆ ತರುವ ಘಟಕ ಸ್ಥಾಪಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೆ ?

ಆ) ಹಾಗಿದ್ದಲ್ಲಿ ಯಾವಾಗ ?

ಇ) ಇಂಥ ಘಟಕಗಳನ್ನು ಖಾಸಗೀ ವಲಯದಲ್ಲಿ ಸ್ಥಾಪಿಸಲು ಅನುಮತಿ ನೀಡಲಾಗಿದೆಯೇ? ಹಾಗಿದ್ದಲ್ಲಿ ಎಷ್ಟು ? ಹಾಗಿಲ್ಲದಿದ್ದಲ್ಲಿ ಈ ಬಗ್ಗೆ ಸರ್ಕಾರದವರ ಧೋರಣೆ ಏನು ?

ಶ್ರೀ ಜೆ.ಎಸ್. ದೇಶ್‌ಮುಖ್ (ಅರಣ್ಯ, ಗಣಿ ಮತ್ತು ಭೂವಿಜ್ಞಾನ ಮಂತ್ರಿಗಳು).—

ಅ) ಪರಿಷ್ಕರಣ ಘಟಕ ಸ್ಥಾಪಿಸುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ಪರಿಶೀಲನೆಯಲ್ಲಿರುವುದರಿಂದ ಉದ್ಭವಿಸುವುದಿಲ್ಲ.

ಇ) ಖಾಸಗೀ ವಲಯದಲ್ಲಿ ಘಟಕವನ್ನು ಸ್ಥಾಪಿಸುವ ವಿಚಾರವಿಲ್ಲ.